# ಎರಡನೇ ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶಿರಸಿ.

ಸಿ.ಸಿ.ನಂ.1253/2024

ಫಿರ್ಯಾದುದಾರರು ಶಿರಸಿ ಗ್ರಾಮೀಣ ಪೊಲೀಸ ಠಾಣೆ, ಶಿರಸಿ ತಾಲ್ಲೂಕು.

- ವಿರುದ್ಧ -

ಆರೋಪಿತರು 1. ರವಿಚಂದ್ರ ತಂದೆ ಚೇನು ಮರಾಠಿ ಮತ್ತು ಇನ್ನೊಬ್ಬ.

## ದೋಷಾರೋಪಣೆ

**ಶ್ರೀ ನರೇಂದ್ರ ಪ್ರಕಾಶ್ ಆರ್, ಬಿ.ಎ.ಎಲ್.ಎಲ್.ಬಿ, ಎಲ್.ಎಲ್.ಎಮ್.** ಎರಡನೇ ಹೆಚ್ಚುವರಿ ಪ್ರ. ದ. ನ್ಯಾ ದಂಡಾಧಿಕಾರಿಗಳು, ಶಿರಸಿ ಎಂಬುವವರು

**ಆರೋಪಿತರಾದ** 1. **ರವಿಚಂದ್ರ ತಂದೆ ಚೇನು ಮರಾಠಿ,**
ವಯಸ್ಸು ಅ. 22 ವರ್ಷ, ವೃತ್ತಿಃ ಕೂಲಿ ಕೆಲಸ,
ಸಾಃ ಸವಲೆ, ಪೊಃ ಮಂಜುಗುಣಿ, ತಾಃ ಶಿರಸಿ.

2. **ಕೃಷ್ಣಾ ತಂದೆ ಹೇಮು ಮರಾಠಿ,**
ವಯಸ್ಸು ಅ.33 ವರ್ಷ, ವೃತ್ತಿಃ ಕೂಲಿ ಕೆಲಸ,
ಸಾಃ ಬೆಣಗಾಂವ, ಪೊಃ ದೇವನಳ್ಳಿ, ತಾಃ ಶಿರಸಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 26.01.2024 ರಂದು ರಾತ್ರಿ 11-00 ಗಂಟೆಗೆ ಶಿರಸಿ ಗ್ರಾಮೀಣ ಪೋಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ದೇವನಳ್ಳಿ ಪಂಚಾಯತ್ ವ್ಯಾಪ್ತಿಗೆ ಬರುವ ಸವಲೆ ಬಸ್ಸ ನಿಲ್ದಾಣ ಹತ್ತಿರ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ನಾಮಧಾರಿ ಸಮುದಾಯದವರು ಗುರುವಂದನಾ ಕಾರ್ಯಕ್ರಮ ಮತ್ತು

ಶ್ರೀ ಸತ್ಯ ನಾರಾಯಣ ಪೂಜಾ ಕಾರ್ಯಕ್ರಮ ಇಟ್ಟುಕೊಂಡು ಬ್ಯಾನರ್ ಮತ್ತು ಪ್ಲೇಕ್ಸ ಸಾರ್ವಜನಿಕ ಸ್ಥಳದಲ್ಲಿ ಅಳವಡಿಸಲು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಶರತ್ತು ಬದ್ಧ ಪರವಾನಿಗೆ ಪಡೆದು ಸವಲೆ ಬಸ್‌ಸ್ ಸ್ಟಾಪ್ ಪಕ್ಕದಲ್ಲಿ, ಶಿಕ್ಷಣ ಸಚಿವರು ಶ್ರೀ ಮಧು ಬಂಗಾರಪ್ಪ ಹಾಗೂ ಶಿರಸಿ–ಸಿದ್ದಾಪುರ ಕ್ಷೇತ್ರದ ಶಾಸಕರಾದ ಶ್ರೀ ಭೀಮಣ್ಣ ನಾಯಕ ಹಾಗೂ ಅವರ ಸಮಾಜದ ಗುರುಗಳು ಶ್ರೀ.ಶ್ರೀ.ಶ್ರೀ. ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿರವರ ಪೋಟೋ ಇರುವ 6–8 ನೇದರ ಪ್ಲೇಕ್ಸನ್ನು ಹಾಕಿ ಮನೆಗೆ ಹೋದಾಗ 1 ಮತ್ತು 2ನೇ ಆರೋಪಿತರಾದ ನೀವು ಸೇರಿಕೊಂಡು ಈ ಕಾರ್ಯಕ್ರಮಕ್ಕೆ ನಿಮ್ಮ ಮರಾಠಿ ಸಮುದಾಯದವರನ್ನು ಕರೆದಿರುವುದಿಲ್ಲ ಅಂತಾ ಸಿಟ್ಟನಿದ್ದ ಇದಿದ್ದು, ನಿಮ್ಮ ಪೈಕಿ 2ನೇ ಆರೋಪಿತನಿಗೆ ಸಂಬಂಧಿಸಿದ ಮಾರುತಿ ಸುಜುಕಿ ಕಂಪನಿಯ ಸಿಲ್ವರ ಬಣ್ಣದ ಅಲ್ಟೋ ಕಾರ ನಂ. ಕೆ.ಎ–25 ಎನ್ –6668 ನೇದರ ಮೇಲೆ 500 ಎಮ್. ಎಲ್ ಅಳತೆಯ ಕುಡಿಯುುವ  ನೀರಿನ ಪ್ಲಾಸ್ಟೀಕ್ ಬಾಟಲಿ ಪೆಟ್ರೋಲ್  ತೆಗೆದುಕೊಂಡು ಕಾರಿನಲ್ಲಿ ಬಂದು ಶಿರಸಿ ದೇವನಳ್ಳಿ ಸವಲೆ ಬಸ್ಸ ನಿಲ್ದಾಣದ ಪಕ್ಕದಲ್ಲಿ ಹಾಕಿರುವ ಪ್ಲೇಕ್ಸ್ ಗೆ ಪೆಟ್ರೋಲ್ ಸುರಿದು ಬೆಂಕಿ ಪಟ್ಟಣದ ಕಡ್ಡಿಯನ್ನು ಗಿರಿ ಬೆಂಕಿ ಹಾಕಿ ಸುಮಾರು 500ರೂ. ಬೆಲೆ ಬಾಳುವ ಪ್ಲೇಕ್ಸ ಸುಟ್ಟು ಹಾಕಿ ಲುಕ್ಸಾನು ಪಡಿಸಿದ್ದು, ಆ  ಮೂಲಕ ಭಾರತೀಯ ದಂಡ ಸಂಹಿತೆ ಕಲಂ 435 ಮತ್ತು 427 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತಿರೆಂದು,

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

**ರುಜು**/-

ದಿನಾಂಕ : 07.09.2026. **2 ನೇ ಹೆ.ಪ್ರ.ದ.ನ್ಯಾದಂ., ಶಿರಸಿ**

**1ನೇ ಆರೋಪಿಯ ಉತ್ತರ**

ಪ್ರಶ್ನೆ 1: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

**ಉತ್ತರಃ ಹೌದು ತಿಳಿಯಿತು.**

ಪ್ರಶ್ನೆ 2: ಆರೋಪಣೆಯನ್ನು ಒಪ್ಪಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರಃ ವಿಚಾರಣೆಯಾಗಬೇಕು.**

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆಯೆಂದು ದೃಢೀಕರಿಸಲಾಗಿದೆ.)

**ರುಜು/-**

ದಿನಾಂಕ : 07.09.2026. **2 ನೇ ಹೆ.ಪ್ರ.ದ.ನ್ಯಾದಂ., ಶಿರಸಿ**

**2ನೇ ಆರೋಪಿಯ ಉತ್ತರ**

ಪ್ರಶ್ನೆ 1: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

**ಉತ್ತರಃ ಹೌದು ತಿಳಿಯಿತು.**

ಪ್ರಶ್ನೆ 2: ಆರೋಪಣೆಯನ್ನು ಒಪ್ಪಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರಃ ವಿಚಾರಣೆಯಾಗಬೇಕು.**

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆಯೆಂದು ದೃಢೀಕರಿಸಲಾಗಿದೆ.)

**ರುಜು/**

ದಿನಾಂಕ : 07.09.2026. **2 ನೇ ಹೆ.ಪ್ರ.ದ.ನ್ಯಾದಂ., ಶಿರಸಿ**